ಡಿಡಬ್ಲೂ.**1: ಮಂಜುನಾಥ ಎಸ್**

**ದಿನಾಂಕಃ 18.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದಃ**

ನಾನು ಬಜಾಜ್ ವಿಮಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ತಿಂಗಳಿಗೆ 25 ಸಾವಿರ ವೇತನವಿದೆ. ಪಿರ್ಯಾದುದಾರರು 7 ವರ್ಷಗಳಿಂದ ಪರಿಚಯವಿರುತ್ತಾರೆ. ಈ 7 ವರ್ಷಗಳ ಅವಧಿಯಲ್ಲಿ ಪಿರ್ಯಾದುದಾರರನ್ನು 8 ರಿಂದ 10 ಬಾರಿ ಹಣಕಾಸಿನ ಸಹಾಯ ಕೇಳಿರುತ್ತೇನೆ. ನಿಮಗೆ ಕ್ರೆಡಿಟ್ ಕಾರ್ಡ್ ಸಾಲ ಹಾಗೂ ಕೈ ಸಾಲ ಇದ್ದವು ಎಂದರೆ ಸರಿ.

**2.** 2022 ನೇ ಜವರಿಯಲ್ಲಿ ನೀವು ಪಿರ್ಯಾದುದಾರರ ಬಳಿ ಹಣಕಾಸಿನ ಸಹಾಯ ಕೇಳಿರುತ್ತೀರಿ ಎಂದರೆ ಸರಿ. ಜನವರಿ 2022 ನೇ ಇಸವಿಯಿಂದ ಇಲ್ಲಿಯವರೆಗೆ ನೀವು ಪಿರ್ಯಾದುದಾರರಿಂದ ಎಷ್ಟು ಹಣವನ್ನು ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು ಒಟ್ಟು ರೂ.8,50,000/- ಪಡೆದುಕೊಂಡಿದ್ದೆನು ಅದರಲ್ಲಿ ರೂ.3,50,000/- ಪಾವತಿಸಿದ್ದು ಉಳಿಕೆ ರೂ.5,00,000/- ಪಾವತಿ ಮಾಡಬೇಕು ಎಂದು ನುಡಿಯುತ್ತಾರೆ. ನಾನು ನನ್ನ ಕೈ ಸಾಲಗಳ ತೀರುವಳಿಗಾಗಿ ಪಿರ್ಯಾದುದಾರರಿಂದ ಹಣ ಪಡೆದುಕೊಂಡಿದ್ದೆನು. ಪಿರ್ಯಾದುದಾರರಿಗೆ ನೀವು ರೂ.6,50,000/- ನೀಡಬೇಕಾಗಿರುತ್ತದೆ ಎಂದರೆ ಸರಿಯಲ್ಲ. ರೂ.3,50,000/- ಗಳನ್ನು ನಗದು ಹಾಗೂ ಚೆಕ್ಕು ಮೂಲಕ ಪಿರ್ಯಾದುದಾರರಿಗೆ ಪಾವತಿಸಿದ್ದೇನೆ. ಪಿರ್ಯಾದುದಾರರಿಗೆ ರೂ.3,50,000/- ಪಾವತಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಹಣ ಪಡೆದುಕೊಂಡ ಕಾರಣ ಪಿರ್ಯಾದುದಾರರಿಗೆ ಚೆಕ್ಕುಗಳನ್ನು ನೀಡಿದ್ದೀರಿ ಎಂದರೆ ಸರಿಯಲ್ಲ, ಸಾಕ್ಷಿಯು ನನ್ನ ಹೆದರಿಸಿ ಪಿರ್ಯಾದುದಾರರು ನನ್ನಿಂದ ಬಲವಂತವಾಗಿ ಚೆಕ್ಕುಗಳನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

**ಡಿಡಬ್ಲೂ.1: ಮಂಜುನಾಥ ಎಸ್**

**3.** ನಿ.ಪಿ.1 ರ ಚೆಕ್ಕನ್ನು ನೀವೇ ನೀಡಿದ್ದೀರಾ ಎಂದರೆ ಸಾಕ್ಷಿಯು ಪಿರ್ಯಾದುದಾರರು ನನ್ನನ್ನು ಹೆದರಿಸಿ ನನ್ನಿಂದ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ.1 ರಲ್ಲಿನ ಸಹಿ ನನ್ನದಾಗಿರುತ್ತದೆ. ಪಿರ್ಯಾದುದಾರರು ವಕೀಲರು ಮುಖಾಂತರ ನೋಟೀಸು ನೀಡಿದ್ದರು ಎಂದರೆ ಅದು ನನಗೆ ತಲುಪಿರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.3 ಅನ್ನು ಸಾಕ್ಷಿಗೆ ತೋರಿಸಲಾಗಿ ಸದರಿ ನೋಟೀಸು ನನಗೆ ತಲುಪಿರುತ್ತದೆ ಎಂದು ನುಡಿಯುತ್ತಾರೆ. ಅದಕ್ಕೆ ನೀವು ಪ್ರತ್ಯುತ್ತರ ನೀಡಿಲ್ಲ ಎಂದರೆ ಸರಿ. ನೀವು ಪಿರ್ಯಾದುದಾರರಿಗೆ ರೂ.6,50,000/- ಮರುಪಾವತಿ ಮಾಡಬೇಕಾಗಿರುತ್ತದೆ ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ರೂ.3,50,000/- ಮರುಪಾವತಿ ಮಾಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಮ್ಮ ತಾಯಿಯ ಖಾತೆಯ ಮುಖಾಂತರ ಚೆಕ್ಕು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಪಿರ್ಯಾದುದಾರರಿಂದ ರೂ.8,50,000/- ಪಡೆದುಕೊಂಡಿದ್ದು ಬಾಕಿ ರೂ.6,50,000/- ನೀಡಬೇಕಾಗಿರುತ್ತದೆ ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ರೂ.6,50,000/- ಮರುಪಾವತಿ ಮಾಡಬೇಕಾಗಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.